ಮುತ್ತುಸ್ವಾಮಿ ದೀಕ್ಷಿತರು ತ್ಯಾಗರಾಜರು ಶ್ಯಾಮಾಶಾಸ್ತ್ರಿಗಳು

ಕರ್ನಾಟಕ ಸಂಗೀತ ತ್ರಿಮೂರ್ತಿಗಳ ಕೃತಿಗಳಲ್ಲಿ 'ಭಕ್ತಿ ಮತ್ತು ಅಧ್ಯಾತ್ಮ'

ಪ್ರೊ. ಡಾ. ಸಿ.ಎ. ಶ್ರೀಧರ್

ಕರ್ನಾಟಕ ಸಂಗೀತ ಪರಂಪರೆಯಲ್ಲಿ 'ತ್ರಿಮೂರ್ತಿ'ಗಳೆಂದೇ ಪ್ರಸಿದ್ಧರಾದ ಮೂರು ಮಂದಿ ವಾಗ್ಗೇಯಕಾರರು ಸಂಗೀತವನ್ನು ಅದರ ಉತ್ತುಂಗ ಶಿಖರಕ್ಕೇರಿಸಿದರು; ಸಂಗೀತಕ್ಕೂ ಆಧ್ಯಾತ್ಮಿಕತೆಗೂ ಇರುವ ಅನನ್ಯ ಸಂಬಂಧವನ್ನು ಇನ್ನಷ್ಟು ಬಲಪಡಿಸಿದರು. ಈ ಕುರಿತು ಇಲ್ಲಿ ವಿವರಿಸಿರುವ ಲೇಖಕರು ಪ್ರಸಿದ್ಧ ಗಾಯಕರೂ, ವೇಣುವಾದಕರೂ, ಸಂಗೀತ ಶಾಸ್ತ್ರಜ್ಞರೂ ಆಗಿದ್ದಾರೆ. ಸಂಗೀತವನ್ನು ಕುರಿತ ಸಂಶೋಧನೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವ ಅವರು ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಗೀತ ಪ್ರಾಧ್ಯಾಪಕರಾಗಿದ್ದಾರೆ.

ಭಾರತೀಯ ಸನಾತನ ಧರ್ಮ ಸಂಸ್ಕೃತಿಯಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಸಿದ್ಧಿಗಾಗಿ ಹಲವು ಮಾರ್ಗಗಳಿವೆ. ಕಲಿಯುಗದಲ್ಲಿ ನಾಮಸಂಕೀರ್ತನೆ ಮತ್ತು ಭಕ್ತಿಮಾರ್ಗದ ಮೂಲಕ ಮೋಕ್ಷಸಾಧನೆ ಸುಲಭ ಸಾಧ್ಯವೆಂಬುದು ಜ್ಞಾನಿಗಳ ಮತ.

ಶಾಂಡಿಲ್ಯ ಮಹರ್ಷಿಗಳು ಹೇಳುವಂತೆ 'ಸಾ ಪರಾನುರಕ್ತಿರೀಶ್ವರೇ' ಎಂದರೆ ಈಶ್ವರನಲ್ಲಿ ಪರಮ ಅನುರಾಗ ಅರ್ಥಾತ್ ಪರಮಪ್ರೇಮವೇ ಭಕ್ತಿ. ದೇವರ್ಷಿ ನಾರದರು ತಮ್ಮ ಭಕ್ತಿ ಸೂತ್ರದಲ್ಲಿ 'ಸಾ ತ್ವಸ್ಮಿನ್ ಪರಮ ಪ್ರೇಮರೂಪಾ' ಎಂದಿದ್ದಾರೆ. ಇದರರ್ಥ ಆ ಪರಮೇಶ್ವರನಲ್ಲಿ ಅತಿಶಯ ಪ್ರೇಮರೂಪವೇ ಭಕ್ತಿ. 'ಅಮೃತ ಸ್ವರೂಪಾ ಚ' ಎಂದರೆ, ಅದು ಅಮೃತ ಸ್ವರೂಪ. ಈ ವಿಶಿಷ್ಟ ಭಕ್ತಿಮಾರ್ಗದಲ್ಲಿ ಪ್ರಾಚೀನ ಕಾಲದಿಂದಲೂ ಹಲವಾರು ಪುಣ್ಯಾತ್ಮರುಗಳು ಸಾಗಿಬಂದು ಜೀವನವನ್ನು ಸಾರ್ಥಕ ಪಡಿಸಿಕೊಂಡಿದ್ದಾರೆ. ಶ್ರೀಮದ್ಭಾಗವತದಲ್ಲಿ ಶ್ರೀ ಪ್ರಹ್ಲಾದರು ಹೇಳಿರುವಂತೆ,

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಮ್ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥

— ಎಂಬುದಾಗಿ ಭಕ್ತಿಯು ಒಂಬತ್ತು ಪ್ರಕಾರದಲ್ಲಿದೆ. ಭಕ್ತಿಯೋಗದ ಹಿರಿಮೆಯಿಂದ ಭಗವಂತನನ್ನು ಸುಲಭವಾಗಿ ಒಲಿಸಿಕೊಳ್ಳಲು ಸಾಧ್ಯ. 'ಯೋಗ' ಎಂದರೆ ಭಗವಂತನಲ್ಲಿ ಸೇರುವುದು ಎಂಬುದಾಗಿ ಅರ್ಥ. ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನು ಜಯಿಸಿ, ಅಹಂಭಾವದಿಂದ ಮುಕ್ತನಾಗಿ ಸರ್ವಶಕ್ತ ಭಗವಂತನಲ್ಲಿ ಸಂಪೂರ್ಣವಾಗಿ ಶರಣಾಗತಿ ಹೊಂದುವವನೇ ನಿಜಭಕ್ತ. 'ಅಧ್ಯಾತ್ಮ ರಾಮಾಯಣ'ದಲ್ಲಿ ಹೇಳಿರುವಂತೆ 'ಭಕ್ತಿಯೇ ಮುಕ್ತಿಗೆ ಸಾಧನ'. ಸಂಗೀತ ಲಾಕ್ಷಣಿಕ ಶಾರ್ಙ್ಗದೇವ ಸಂಗೀತದ ವಿಶೇಷತೆ ಬಗ್ಗೆ ತಿಳಿಸುತ್ತಾ, 'ಧರ್ಮಾರ್ಥಕಾಮಮೋಕ್ಷಾಣಾಮಿದಮೇವೈಕ ಸಾಧನಂ'

ಎಂದಿದ್ದಾನೆ. ಅರ್ಥಾತ್ ಧರ್ಮ, ಅರ್ಥ, ಕಾಮ, ಮೋಕ್ಷಗಳಿಗೆ ಸಂಗೀತವೇ ಮುಖ್ಯಸಾಧನ. 'ಶಿವಸರ್ವಸ್ವ' ದಲ್ಲಿಯೂ ಇದೇ ಅಭಿಪ್ರಾಯವಿದೆ. 'ಏಕಂ ಸಂಗೀತ ವಿಜ್ಞಾನಂ ಚತುರ್ವರ್ಗ ಫಲಪ್ರದಂ.' ಒಟ್ಟಿನಲ್ಲಿ ಮೋಕ್ಷಪ್ರಾಪ್ತಿಯಲ್ಲಿ ಸಂಗೀತ ವಿದ್ಯೆ ಮಹಿಮಾತಿಶಯವುಳ್ಳದ್ದು.

ನಾದೋಪಾಸನಯಾ ದೇವಂ ಬ್ರಹ್ಮವಿಷ್ಣುಮಹೇಶ್ವರಾಃ।
ಭವಂತ್ಯುಪಾಸಿತಾ ನೂನಂ ಯಸ್ಮಾದೇತೇ ತದಾತ್ಮಕಾಃ ॥

ಎಂದರೆ, ನಾದಬ್ರಹ್ಮಸ್ವರೂಪರಾದ ಬ್ರಹ್ಮ, ವಿಷ್ಣು, ಮಹೇಶ್ವರರು ನಾದೋಪಾಸನೆಯಿಂದ ನಿಶ್ಚಯವಾಗಿ ಉಪಾಸನೆಗೊಳ್ಳುತ್ತಾರೆ. **ಪದ್ಮಪುರಾಣ**ದಲ್ಲಿ ಭಗವಂತನು ನಾರದನಿಗೆ ಹೇಳಿರುವಂತೆ,

ನಾಹಂ ವಸಾಮಿ ವೈಕುಂಠೇ ಯೋಗಿನಾಂ ಹೃದಯೇ ನ ಚ।
ಮದ್ಭಕ್ತಾಃ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ ॥

ಎಂದರೆ ಭಗವಂತನ ವಾಸಸ್ಥಾನ ವೈಕುಂಠದಲ್ಲಾಗಲೀ, ಯೋಗಿಗಳ ಹೃದಯದಲ್ಲಾಗಲೀ ಇಲ್ಲ. ಎಲ್ಲಿ ತನ್ನ ಭಕ್ತರು ಹಾಡುತ್ತಾರೋ, ಅಲ್ಲಿ ತಾನು ವಾಸಿಸುವುದಾಗಿ ನಾರದನಿಗೆ ಸಾಕ್ಷಾತ್ ಭಗವಂತನೇ ತಿಳಿಸಿದ್ದಾನೆ. **ವಿಷ್ಣುಪುರಾಣ** ರೀತ್ಯಾ ಸಂಗೀತವು ಭಗವದಂಶ. **ಯಾಜ್ಞವಲ್ಕ್ಯ ಸ್ಮೃತಿ**ಯಲ್ಲಿ ಹೇಳಿರುವಂತೆ,

ವೀಣಾವಾದನ-ತತ್ತ್ವಜ್ಞಃ ಶ್ರುತಿ- ಜಾತಿ-ವಿಶಾರದಃ।
ತಾಳಜ್ಞಶ್ಚಾಪ್ರಯಾಸೇನ ಮೋಕ್ಷಮಾರ್ಗಂ ಸ ಗಚ್ಛತಿ ॥

ಇದರಂತೆ, ವೀಣಾವಾದನ ತತ್ತ್ವ ಬಲ್ಲವನೂ, ಶ್ರುತಿ ಜಾತಿ ವಿವೇಚನೆಗಳನ್ನು ತಿಳಿದವನೂ, ತಾಳವನ್ನು ತಿಳಿದಾತನು ಯಾರೋ ಅವನು ಪ್ರಯಾಸವಿಲ್ಲದೆ ಮೋಕ್ಷವನ್ನು ಹೊಂದುತ್ತಾನೆ.

ಭಕ್ತಿಸಹಿತ ಸಂಗೀತವೇ ನಾದಯೋಗ. ಪರಮಾತ್ಮನ ಸಾಕ್ಷಾತ್ಕಾರ ಹೊಂದಲು ಇದು ಸುಲಭಮಾರ್ಗ. ಈ ಶ್ರೇಯೋಮಾರ್ಗದಲ್ಲಿ ಸಾಗಿಬಂದು ಮುಕ್ತಿಯನ್ನು ಸಾಧಿಸಿದ ನಾದಯೋಗಿಗಳ ಭವ್ಯ ಪರಂಪರೆಯೇ ಉಂಟು. ಕೆಲವು ಮಹಾನುಭಾವರನ್ನು ಉಲ್ಲೇಖಿಸುವುದಾದರೆ: ನಾರದ, ತುಂಬುರು, ಆಂಜನೇಯ, ಪ್ರಹ್ಲಾದ, ಭರತ, ಮತಂಗ, ತಮಿಳುನಾಡಿನ ತೇವಾರಂ ರಚನಕಾರರು, ದಿವ್ಯಪ್ರಬಂಧ ರಚನಕಾರರು, ಕರ್ನಾಟಕದ ಕೆಲವು ಶಿವಶರಣರು, ಹರಿದಾಸರು, ಅನ್ನಮಾಚಾರ್ಯರು, ತುಕಾರಾಂ, ಮೀರಾಬಾಯಿ, ಚೈತನ್ಯಪ್ರಭು, ಕಬೀರದಾಸರು, ತುಲಸೀದಾಸರು, ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಶಾರದಾಮಾತೆ ಹಾಗೂ ಕರ್ನಾಟಕ ಸಂಗೀತ ತ್ರಿಮೂರ್ತಿಗಳೆನಿಸಿದ ಶ್ರೀತ್ಯಾಗರಾಜರು, ಶ್ರೀಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ಯಾಮಾಶಾಸ್ತ್ರಿಗಳು.

ಪ್ರಕೃತ ಲೇಖನದಲ್ಲಿ ಕರ್ನಾಟಕ ಸಂಗೀತ ತ್ರಿಮೂರ್ತಿಗಳ ರಚನೆಗಳಲ್ಲಿ ಭಕ್ತಿ ಮತ್ತು ಅಧ್ಯಾತ್ಮ ಅಂಶಗಳನ್ನು ಪರಿಚಯಿಸಲಾಗಿದೆ. ಸಂತ ವಾಗ್ಗೇಯಕಾರರ ಪಂಕ್ತಿಯಲ್ಲಿರುವ ಈ ಮಹಾನುಭಾವರು ಭಾರತೀಯ ಸಾಂಸ್ಕೃತಿಕ ಮೌಲ್ಯ, ತತ್ತ್ವಾದರ್ಶಗಳನ್ನು ಮಹೋನ್ನತವಾಗಿ ಬೆಳಗಿದರು. ಇವರುಗಳು ತಮ್ಮ ಅಪರಿಮಿತ ವ್ಯುತ್ಪತ್ತಿ, ಪ್ರತಿಭಾವಿಶೇಷಗಳಿಂದ ಸಹಸ್ರಾರು ಸಂಗೀತ ಕೃತಿಗಳನ್ನು ರಚಿಸಿ, ಭಕ್ತಿ ಪಾರಮ್ಯವನ್ನು ಎತ್ತಿ ಹಿಡಿದು ಅಧ್ಯಾತ್ಮ ಸಾಧನೆ ಸಿದ್ಧಿಪಡೆದು, ಜನಸಾಮಾನ್ಯರ ಜೀವನ ಸಾರ್ಥಕತೆಗಾಗಿ ತಮ್ಮ ಜೀವನವನ್ನೇ ಮೀಸಲಿರಿಸಿದ ಪುಣ್ಯಾತ್ಮರು.

ಸದ್ಗುರು ಶ್ರೀ ತ್ಯಾಗರಾಜರ ಕೃತಿಗಳು ಸುಮಾರು ೨೪,೦೦೦. ಇವುಗಳು 'ತ್ಯಾಗರಾಜೋಪನಿಷತ್' ಎಂಬುದಾಗಿ ಪ್ರಸಿದ್ಧವಾಗಿವೆ. ಶ್ರೀ ತ್ಯಾಗರಾಜರ ಸಂಗೀತ ವಿಶೇಷವಾಗಿ 'ಭಕ್ತಿಸಂಗೀತ.' ಇವರ ಸಹಸ್ರಾರು ಸಂಗೀತ ಕೃತಿಗಳಲ್ಲಿ ಭಕ್ತಿ, ನವವಿಧ ಭಕ್ತಿ ರಸಗಳು ಪ್ರವಹಿಸಿದೆ. ಭಗವಂತನಲ್ಲಿ ಸದ್ಭಕ್ತಿಯಿರಬೇಕು. ಅವನ ಅನುಗ್ರಹವಿಲ್ಲದಿದ್ದರೆ ಯಾವುದೇ ಸತ್ಕಾರ್ಯಗಳು, ತಪಸ್ಸು ಮತ್ತು ಸಾಧನೆಗಳೆಲ್ಲವೂ ವ್ಯರ್ಥ ಎಂಬುದಾಗಿ 'ಏಮಿ ಚೇಸಿತೇನೇಮಿ' ಎಂಬ ತೋಡಿ ರಾಗದ ಕೃತಿಯಲ್ಲಿ ಹಾಡಿದ್ದಾರೆ. ಧನ್ಯಾಸಿ ರಾಗದ 'ಸಂಗೀತ ಜ್ಞಾನಮು ಭಕ್ತಿ ವಿನಾ' ಎಂಬ ಕೃತಿಯಲ್ಲಿ ಭಕ್ತಿರಹಿತ ಸಂಗೀತಜ್ಞಾನವು ವ್ಯರ್ಥ ಎಂಬುದಾಗಿ ಹೇಳಿ 'ಸಂಗೀತ -ಭಕ್ತಿ'ಗಳ ಸುಂದರ ಸಮೀಕರಣವನ್ನು ನೀಡಿದ್ದಾರೆ. ಶ್ರೀ ತ್ಯಾಗರಾಜರು ತಿರುಪತಿಗೆ ಯಾತ್ರೆ ಹೋಗಿದ್ದಾಗ, ಗರ್ಭಗುಡಿಯ ಬಳಿಗೆ ಬಂದಾಗ ಶ್ರೀವೆಂಕಟೇಶ್ವರನ ಪರದೆ ಮುಚ್ಚಿಕೊಂಡಿದ್ದಿತು. ತಕ್ಷಣ ಶ್ರೀ ತ್ಯಾಗರಾಜರು 'ಗೌಳಿಪಂತು' ರಾಗದಲ್ಲಿ 'ತೆರೆತಿಯ್ಯಗರಾದಾ' ಎಂಬ ಕೃತಿಯನ್ನು ರಚಿಸಿ ಭಕ್ತಿಯಿಂದ ತನ್ಮಯರಾಗಿ ಹಾಡಿದರು. ತಕ್ಷಣ ಹಾಕಿದ್ದ ಪರದೆ ಕೆಳಕ್ಕೆ ಬಿದ್ದು, ಶ್ರೀತ್ಯಾಗರಾಜರಿಗೆ ವೆಂಕಟೇಶ್ವರನ ದರ್ಶನವಾಯಿತು. ಆನಂದ ಪರವಶರಾದ ಶ್ರೀ ತ್ಯಾಗರಾಜರು ಮಧ್ಯಮಾವತಿ ರಾಗದಲ್ಲಿ 'ವೆಂಕಟೇಶನೀ' ಎಂಬ ಕೃತಿ ರಚಿಸಿ ಹಾಡಿದರು. ಇದು ಭಕ್ತಿಯ ಪವಾಡವಲ್ಲದೆ ಮತ್ತೇನು! ತೋಡಿ ರಾಗದಲ್ಲಿರುವ 'ದಾಶರಥೇ ನೀ ಋಣಮು' ಎಂಬ ಕೃತಿಯಲ್ಲಿ 'ಮುಕ್ತಿ'ಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಾದ, ನಾದಬ್ರಹ್ಮ, ನಾದಯೋಗ, ನಾದೋಪಾಸನೆ, ಪರಮಾತ್ಮನ ಲೀಲೆಗಳಿಗೆ ಸಂಬಂಧಿಸಿದಂತೆ ನೂರಾರು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಶ್ರೀರಾಮನೇ ಆರಾಧ್ಯದೈವ ಮತ್ತು ಪರಬ್ರಹ್ಮ. ಕೆಲವು ಕೃತಿಗಳನ್ನು ಉಲ್ಲೇಖಿಸುವುದಾದರೆ,

ರಾಗ	ತಾಳ	ಕೃತಿ
ಬೇಗಡೆ	ಆದಿತಾಳ	ನಾದೋಪಾಸನ
ಕಲ್ಯಾಣವಸಂತ	ರೂಪಕತಾಳ	ನಾದಲೋಲುಡೈ
ವಾಗಧೀಶ್ವರಿ	ಆದಿತಾಳ	ಪರಮಾತ್ಮಡು
ಹಿಂದೋಳ	ಆದಿತಾಳ	ಸಾಮಜವರಗಮನ
ಪೂರ್ಣಚಂದ್ರಿಕೆ	ಆದಿತಾಳ	ತೆಲಿಸಿ ರಾಮಚಂದ್ರ
ದೇವಗಾಂಧಾರಿ	ಆದಿತಾಳ	ತವಲೋನೆ ಧ್ಯಾನಿಂಚಿ
ಕಾನಡ	ಆದಿತಾಳ	ಸುಖಿ ಎವ್ವರೋ

ಇವರು ತಮ್ಮ ಕೃತಿಗಳು ಮಾನವನ ಮೋಕ್ಷಕ್ಕಾಗಿ ರಚಿಸಲ್ಪಟ್ಟವೆಂದು 'ರಾಗರತ್ನ ಮಾಲಿಕ ಚೇ' ಕೃತಿಯಲ್ಲಿ ತಿಳಿಸಿದ್ದಾರೆ; ಅಧ್ಯಾತ್ಮ ಸಾಧನೆಯಲ್ಲಿ ಭಕ್ತಿಯ ಪಾತ್ರವನ್ನು ಶ್ರೀ ತ್ಯಾಗರಾಜರು ತಮ್ಮ ಗೇಯನಾಟಕಗಳಾದ 'ಪ್ರಹ್ಲಾದ ಭಕ್ತಿವಿಜಯ' ಮತ್ತು 'ನೌಕಾಚರಿತ್ರೆ'ಯಲ್ಲಿ ವಿವರಿಸಿದ್ದಾರೆ. 'ಪ್ರಹ್ಲಾದ ಭಕ್ತಿ ವಿಜಯ' ದಲ್ಲಿ ಜ್ಞಾನ, ವೈರಾಗ್ಯ, ವಿಜ್ಞಾನ ಮತ್ತು ಸದ್ಭಕ್ತಿಗಳ ಪ್ರಾಮುಖ್ಯತೆಯನ್ನು ಸಾರಿದ್ದಾರೆ. 'ರಾಗ ತಾಳಾದಿಯುತ ಗಾನ ರಸಮು ಚೇತ' ಎಂಬುದಾಗಿ ಹೇಳಿ ಭಗವಂತನ ಸಾಕ್ಷಾತ್ಕಾರದ ವಿಷಯದಲ್ಲಿ ಸದ್ಭಕ್ತಿಯೊಡಗೂಡಿದ ಗಾನರಸದ ಪ್ರಯೋಜನದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಭಕ್ತಪ್ರಹ್ಲಾದನ ಪಾತ್ರದಲ್ಲಿ ಶ್ರೀ ತ್ಯಾಗರಾಜರೇ ಪರಕಾಯ ಪ್ರವೇಶ ಮಾಡಿ, ಭಕ್ತಿಪಾರಮ್ಯವನ್ನು ಕೊಂಡಾಡಿದ್ದಾರೆ. ಲೌಕಿಕದ ಎಲ್ಲಾ ಆಮಿಷಗಳನ್ನು ಹೊರಗಿಟ್ಟು ಅನವರತ ಶ್ರೀಹರಿಯ ಸಾನ್ನಿಧ್ಯ, ಪರಮಭಕ್ತಿ, ಅವನ ದರ್ಶನಾನಂದದ ವರವನ್ನು ಕೇಳಿದ ಪ್ರಹ್ಲಾದನ ಪಾತ್ರದಲ್ಲಿ ಶ್ರೀತ್ಯಾಗರಾಜರ ಜೀವನ ಮಾರ್ಗವನ್ನು ಕಾಣಬಹುದಾಗಿದೆ.

'ನೌಕಾಚರಿತ್ರೆ' ಗೇಯನಾಟಕ ಮೇಲ್ನೋಟಕ್ಕೆ 'ಮಧುರ ಭಕ್ತಿ' ಯಿಂದ ಕೂಡಿದ್ದರೂ ಶರಣಾಗತಿ ತತ್ತ್ವ, ಆತ್ಮನಿವೇದನ ಭಕ್ತಿಯೇ ಇಲ್ಲಿ ಪ್ರವಹಿಸಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನೇ ಹೇಳಿರುವಂತೆ, ''ಮನಸ್ಸು ಬುದ್ಧಿಗಳನ್ನು ಭಗವಂತನಲ್ಲಿ ಅರ್ಪಿಸಿ ನಿರಂತರವೂ ಅವನನ್ನೇ (ಶ್ರೀಕೃಷ್ಣಪರಮಾತ್ಮ) ಸ್ಮರಿಸುತ್ತಿರುವವರು ನಿಸ್ಸಂಶಯವಾಗಿ ಅವನನ್ನೇ ಹೊಂದುತ್ತಾರೆ.'' ಇದೇ ತತ್ತ್ವ, ಸಂದೇಶಗಳು ಈ ಗೇಯನಾಟಕದಲ್ಲಿ ಪ್ರತಿಫಲಿತವಾಗಿವೆ. ಇಲ್ಲಿ ನಾಯಕ-ನಾಯಿಕಾ ಭಾವವಿದೆ; ಆತ್ಮ-ಪರಮಾತ್ಮ ಸಮೀಕರಣವಿದೆ. ಅಧ್ಯಾತ್ಮ ಸಿದ್ಧಿ ಪಡೆದಿದ್ದ ಶ್ರೀತ್ಯಾಗರಾಜರು ೯೬ ಕೋಟಿ ಬಾರಿ ಶ್ರೀರಾಮನಾಮವನ್ನು ಜಪಿಸಿ, ಶ್ರೀರಾಮನ ದರ್ಶನಭಾಗ್ಯವನ್ನು ಹೊಂದಿ, ಕಡೆಯಲ್ಲಿ ತಮ್ಮ ಅಂತ್ಯಕಾಲವನ್ನು ಮೊದಲೇ ತಿಳಿದು ಶ್ರೀಪರಮಹಂಸ ಬ್ರಹ್ಮಾನಂದೇಂದ್ರ ಸ್ವಾಮಿಗಳವರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದು 'ನಾದಬ್ರಹ್ಮಾನಂದ' ಎಂಬ ನಾಮಧೇಯವನ್ನು ಹೊಂದಿ ಮಾರನೆಯ ದಿವಸ ಎಂದರೆ ಪುಷ್ಯ ಬಹುಳ ಪಂಚಮಿಯಂದು ಪದ್ಮಾಸನದಲ್ಲಿ ಕುಳಿತು ಯೋಗಮುದ್ರೆಯಲ್ಲಿ ಯೋಗಸಮಾಧಿಗೆ ತೆರಳಿ ನಾದಬ್ರಹ್ಮನಲ್ಲಿ ಐಕ್ಯರಾದರು.

ಶ್ರೀ ಮುತ್ತುಸ್ವಾಮಿ ದೀಕ್ಷಿತರು ಆಧ್ಯಾತ್ಮಿಕ ಭಕ್ತಿ ಸಂಗೀತದ ಸಿದ್ಧ ಪುರುಷರು. ಇವರು ಸ್ವತಃ ಅದ್ವೈತ ವೇದಾಂತಿಗಳಾಗಿದ್ದರು. ಅದ್ವೈತ ತತ್ತ್ವ ಪ್ರತಿಪಾದನೆ ಇವರ ಸಂಗೀತ ಕೃತಿಗಳಲ್ಲಿ ಪ್ರಧಾನವಾಗಿ ಗೋಚರಿಸುತ್ತದೆ. 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ', 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ' ಎಂಬಿತ್ಯಾದಿ ಮಹಾವಾಕ್ಯ ಪ್ರಮೇಯಾದಿಗಳು, ಅವುಗಳ ವ್ಯಾಖ್ಯಾನದಲ್ಲಿ ನ್ಯಾಯಶಾಸ್ತ್ರದ 'ಜಹದಜಹಲ್ಲಕ್ಷಣ'ವನ್ನು ಅನ್ವಯ ಮಾಡಿಕೊಂಡಿದ್ದಾರೆ. ಸಾಧಕನು ಆತ್ಮಸಾಕ್ಷಾತ್ಕಾರವನ್ನು ಹೊಂದಬೇಕಾದರೆ, ಮಾಯೆಯನ್ನು ವಿವೇಕದಿಂದ ಜಯಿಸಬೇಕೆಂದು ಬೋಧಿಸಿದ್ದಾರೆ. ತರಂಗಿಣೀ ರಾಗದಲ್ಲಿರುವ ಆದಿತಾಳದಲ್ಲಿ ನಿಬದ್ಧವಾದ 'ಮಾಯೆ' ಎಂಬ ಕೃತಿಯಲ್ಲಿ 'ಎಲೈ ಮಾಯೆಯೇ, ನಮ್ಮನ್ನು ತ್ಯಜಿಸು, ನನಗೆ ತೊಂದರೆ ನೀಡಲು ನೀನಾರು?' ಎಂಬುದಾಗಿ ಪ್ರಶ್ನಿಸಿರುವ ದೀಕ್ಷಿತರು ನಿಜವಾದ ಅರ್ಥದಲ್ಲಿ ನಾದೋಪಾಸಕರು ಹಾಗೂ ಬ್ರಹ್ಮಜ್ಞಾನಿಗಳು. ಶಂಕರಾಭರಣ ರಾಗದಲ್ಲಿರುವ 'ಶ್ರೀ ದಕ್ಷಿಣಾಮೂರ್ತೇ' ಎಂಬ ಕೃತಿಯಲ್ಲಿ ಸಾಧಕನಿಗೆ ಅನುಭವವೇದ್ಯವಾಗುವ 'ದಕ್ಷಿಣಾಮೂರ್ತಿ' ತತ್ತ್ವವನ್ನು ಕುರಿತು ಬೆಳಕು ಚೆಲ್ಲಿದ್ದಾರೆ. ಪರಬ್ರಹ್ಮ ವಸ್ತುವಿನ ಬಗ್ಗೆ ಜಿಜ್ಞಾಸೆ ನಡೆಸಿದ್ದಾರೆ. ದೇವಿಯನ್ನು ನಾದಸ್ವರೂಪಳೆಂದು 'ವಂಶವತೀ ಶಿವಯುವತೀ' ಎಂಬ ಕೃತಿಯಲ್ಲಿ ಭಕ್ತಿಯಿಂದ ವರ್ಣಿಸಿರುತ್ತಾರೆ. ಸ್ವರಗಳಲ್ಲಿ ಮತ್ತು ೨೨ ಶ್ರುತಿಗಳಲ್ಲಿ ದೇವಿಯ ಸ್ವರೂಪವನ್ನು ವರ್ಣಿಸಿದ್ದಾರೆ.

ಭಕ್ತಿಸಹಿತ ಅಧ್ಯಾತ್ಮ ತತ್ತ್ವವನ್ನು ಪ್ರತಿಪಾದಿಸಿರುವ ಇವರ ನೂರಾರು ಕೃತಿಗಳಿವೆ. ಅವುಗಳ ಪೈಕಿ ಕೆಲವನ್ನು ಉಲ್ಲೇಖಿಸುವುದಾದರೆ, ಶ್ರೀರಾಗ, ಆದಿತಾಳದಲ್ಲಿ ರಚಿತವಾಗಿರುವ 'ಶ್ರೀ ಮೂಲಾಧಾರ', ಆನಂದಭೈರವೀ ರಾಗ, ರೂಪಕತಾಳದಲ್ಲಿ ನಿಬದ್ಧವಾಗಿರುವ ಕೃತಿ 'ಮಾನಸ ಗುರುಗುಹ', ಶಂಕರಾಭರಣ ರಾಗ ರೂಪಕ ತಾಳದಲ್ಲಿ ರಚಿತವಾಗಿರುವ 'ಶ್ರೀ ಮೂಕಾಂಬಿಕಯಾ', ಆನಂದ ಭೈರವೀ ರಾಗ ತ್ರಿಪುಟತಾಳದಲ್ಲಿ ನಿಬದ್ಧವಾಗಿರುವ 'ಆನಂದೇಶ್ವರೇಣ', ವೇಗವಾಹಿನೀ ರಾಗ ಝಂಪೆ ತಾಳದಲ್ಲಿ ರಚಿತವಾಗಿರುವ 'ವೀಣಾಪುಸ್ತಕಧಾರಿಣೀಂ', ಆನಂದಭೈರವೀ ರಾಗ ರೂಪಕತಾಳದಲ್ಲಿ ರಚಿತವಾಗಿರುವ 'ತ್ಯಾಗರಾಜಯೋಗ ವೈಭವಂ'.

ಶ್ರೀ ಮುತ್ತುಸ್ವಾಮಿ ದೀಕ್ಷಿತರ ಸಂಗೀತ ಕೃತಿಗಳಲ್ಲಿನ ವಾಕ್ ಮತ್ತು ಗೇಯಾಂಶಗಳು, ಪಾರ್ವತೀ ಪರಮೇಶ್ವರ ತತ್ತ್ವಗಳಂತೆ ಅವಿನಾಭಾವವಾಗಿ ಸಮೀಕರಿಸಲ್ಪಟ್ಟು ಭಕ್ತಿಗಾನದ ದ್ವಾರಾ ಅಧ್ಯಾತ್ಮಾನುಭವಕ್ಕೆ ದಾರಿಮಾಡಿಕೊಟ್ಟಿವೆ.

ಎಲ್ಲಾ ದೈವಗಳೂ ಒಂದೇ, ಜಗನ್ನಿಯಾಮಕನಾದ ಪರ ಬ್ರಹ್ಮನ ಹಲವು ಮುಖಗಳಷ್ಟೇ. ಈ ಎಲ್ಲಾ ದೈವಗಳ ಪೂಜೆ (ಸಗುಣೋಪಾಸನೆ) ತನ್ನ ಆತ್ಮದಲ್ಲಿಯೇ ಇರುವ ಪರಮಾತ್ಮನನ್ನು ಅರಿಯುವ ಸನ್ಮಾರ್ಗ ಎಂಬುದು ಶ್ರೀ ಮುತ್ತುಸ್ವಾಮಿ ದೀಕ್ಷಿತರ ಸಂದೇಶ. ಇದುವೇ ನಮ್ಮ ಭಾರತೀಯ ಸನಾತನ ಧರ್ಮದ ಸಂದೇಶ. ಶ್ರೀರಾಮಕೃಷ್ಣ ಪರಮಹಂಸರು, ಶ್ರೀ ವಿವೇಕಾನಂದರು, ಶ್ರೀ ಶಾರದಾಮಾತೆಯವರ ಸಂದೇಶಾಮೃತ ಕೂಡಾ ಇದೇ ಆಗಿದೆ.

ಶ್ರೀ ಶ್ಯಾಮಾಶಾಸ್ತ್ರಿಯವರು ಶ್ರೀವಿದ್ಯಾ ಉಪಾಸಕರೂ ಬಂಗಾರು ಕಾಮಾಕ್ಷಿದೇವಿಯ ಪರಮ ಭಕ್ತರೂ ಆಗಿದ್ದರು. ಭಕ್ತಿಯ ಪರಾಕಾಷ್ಠೆ ಹಾಗೂ ಅಧ್ಯಾತ್ಮ ಸಾಧನೆ, ಸಿದ್ಧಿಗಳನ್ನು ಇವರ ಸಂಗೀತ ಕೃತಿಗಳಲ್ಲಿ ಕಾಣಬಹುದು.

ಬಂಗಾರು ಕಾಮಾಕ್ಷಿದೇವಿಯ ಅರ್ಚಕರಾಗಿದ್ದ ಈ ಮಹಾನುಭಾವರು ದೇವಿಯ ಪೂಜಾಕಾಲದಲ್ಲಿ ಮೈಮರೆತು ಭಕ್ತಿಯಿಂದ

ಮನದುಂಬಿ ಹಾಡಿ, ಕೃತಿಗಳನ್ನು ರಚಿಸಿ ಜಗನ್ಮಾತೆಯ ಅನುಗ್ರಹವನ್ನು ಸಂಪಾದಿಸಿದವರು. ಶ್ರೀರಾಮಕೃಷ್ಣ ಪರಮಹಂಸರೂ ಸಹಾ ಕಾಳಿಮಾತೆಯ ಪೂಜಾಕೈಂಕರ್ಯದ ವೇಳೆ ಮೈಮರೆತು ಭಕ್ತಿಯಿಂದ ಹಾಡಿ ತನ್ಮಯರಾಗುತ್ತಿದ್ದುದನ್ನು ಹಾಗೂ ಕಾಳೀಮಾತೆಯೊಡನೆ ಸಂಭಾಷಣೆ ನಡೆಸುತ್ತಿದ್ದುದನ್ನು ಇಲ್ಲಿ ಉಲ್ಲೇಖಿಸಬಹುದು. ಇವರು ಹೊಗಳಿಕೆ, ರಾಜಗೌರವಗಳಿಗೆ ಎಂದೂ ಮಾರುಹೋದವರಲ್ಲ.

'ಪಾಲಿಂಚು ಕಾಮಾಕ್ಷಿ' ಎಂಬ ಮಧ್ಯಮಾವತಿ ರಾಗದಲ್ಲಿರುವ ಕೃತಿಯಲ್ಲಿ ಅದ್ಭುತ ಸಾಧನೆಗಾಗಿ ದೇವಿಯ ರಕ್ಷೆ ಬೇಡುತ್ತಾರೆ. ಆಹಿರಿ ರಾಗದ 'ಮಾಯಮ್ಮ' ಎಂಬ ಕೃತಿ ಅಧ್ಯಾತ್ಮ ಸಾಧನೆಯಲ್ಲಿರುವ ಭಕ್ತನ ಹೃದಯವನ್ನು ತೆರೆದಿಡುವಂತಿದೆ. ನಿಧಾನವಾದ ಗತಿಯಲ್ಲಿ ಪ್ರಾರಂಭವಾಗಿ ದೇವಿಯ ಅನುಗ್ರಹವು ದೊರಕದೆ, ಕೋಪಿಸಿಕೊಂಡ 'ಮಗು'ವಿನ ಮನೋಭಾವವನ್ನು ಸೂಚಿಸುವಂತಿದೆ. ಲಯ-ರಾಗ-ಭಾವ-ಭಕ್ತಿಗಳ ಸುಮಧುರ ಸಮ್ಮಿಲನವಿದೆ.

ಇವರು ಸುಮಾರು ೩೦೦ ಕೃತಿಗಳನ್ನು ರಚಿಸಿದ್ದಾರೆ. ಮೇಲೆ ಹೇಳಿದ ಸುಮಧುರ ಸಮ್ಮಿಲನವಿರುವ ಕೆಲವು ಕೃತಿಗಳನ್ನು ಉಲ್ಲೇಖಿಸುವುದಾದರೆ: ಆನಂದಭೈರವೀರಾಗ, ಮಿಶ್ರಛಾಪುತಾಳದಲ್ಲಿರುವ 'ಮರಿವೇರೆ ಗತಿ' ಎಂಬ ಕೃತಿ, ಲಲಿತರಾಗ ಮಿಶ್ರಛಾಪು ತಾಳದಲ್ಲಿರುವ 'ನನ್ನು ಬ್ರೋವು' ಎಂಬ ಕೃತಿ, ಶಂಕರಾಭರಣ ರಾಗ ಆದಿತಾಳದಲ್ಲಿರುವ 'ದೇವೀ ಮೀನನೇತ್ರಿ' ಎಂಬ ಕೃತಿ, ಆಹಿರಿರಾಗ, ಆದಿತಾಳದಲ್ಲಿರುವ 'ಮಾಯಮ್ಮಯನಿ' ಎಂಬ ಕೃತಿ.

ಒಟ್ಟಿನಲ್ಲಿ ಹೇಳುವುದಾದರೆ, ಕರ್ನಾಟಕ ಸಂಗೀತ ತ್ರಿಮೂರ್ತಿಗಳು ಭಕ್ತಾಗ್ರೇಸರೂ, ನಾದೋಪಾಸಕರೂ ಆಗಿದ್ದು ಅಪೂರ್ವ ನಾದಯೋಗ – ಭಕ್ತಿಯೋಗದ ಮೂಲಕ ಪರಮಾತ್ಮ ತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡ ಮಹಾನುಭಾವರು. ಇವರುಗಳು ವೈರಾಗ್ಯದ ಸಾಕಾರ ಮೂರ್ತಿಗಳಾಗಿದ್ದರು. ವೇದೋಪನಿಷತ್ತುಗಳು, ಅಷ್ಟಾದಶ ಪುರಾಣ, ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ, ಮಂತ್ರತಂತ್ರಶಾಸ್ತ್ರಗಳು, ಜ್ಯೋತಿಷ್ಯ ಮುಂತಾದವುಗಳ ಸಾರವನ್ನು ತಮ್ಮ ಸಂಗೀತ ರಚನೆಗಳಲ್ಲಿ ಎರಕಹೊಯ್ದು ಮಾನವ ಕೋಟಿಯ ಕಲ್ಯಾಣಕ್ಕಾಗಿ ನೀಡಿದ ನಾದಯೋಗಿಗಳು ಇವರು; ಅಪೂರ್ವ ಭಕ್ತಿಪಾರಮ್ಯವನ್ನವರು ಮೆರೆದರು. 'ದೇವನೊಬ್ಬ ನಾಮ ಹಲವು' ಎಂಬ ಸನಾತನ ಧರ್ಮದ ತತ್ತ್ವದ ಆಧಾರದ ಮೇಲೆ ಬೇರೆ ಬೇರೆ ದೇವಾನುದೇವತೆಗಳ ಕುರಿತು ಅಸಂಖ್ಯಾತ ಭಕ್ತಿ ಸಂಗೀತ ಕೃತಿಗಳನ್ನು ರಚಿಸಿ ಅವೆಲ್ಲಾ ರೂಪಗಳನ್ನು 'ಪರ ಬ್ರಹ್ಮತತ್ತ್ವ'ದಲ್ಲಿ ಏಕೀಭವಿಸಿಕೊಂಡು ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿದ ನಾದೋಪಾಸಕರಿವರು. ಮುಕ್ತಿಗಾಗಿ, ಭಕ್ತಿ ಹಾಗೂ ನಾದಯೋಗಗಳ ಮೂಲಕ ಸಾಧನೆಯನ್ನು ನಡೆಸುವ ಸಾಧಕರಿಗೆ ಕರ್ನಾಟಕಸಂಗೀತತ್ರಿಮೂರ್ತಿಗಳು ಸರ್ವದಾ ಪರಮಪೂಜ್ಯರೂ ಮತ್ತು ಪರಮ ಆಚಾರ್ಯರೂ ಆಗಿರುತ್ತಾರೆ. ❋

with Best Compliments from

Technopolymers Pvt. Ltd.,

B-185, 2nd Stage, Industrial Estate, Peenya
Bangalore - 560 058 Tel : 28360264
e-mail : technopolymers.pvtltd@gmail.com

Contact for your requirements of:

Vacuum Processed Epoxy Resin,
Cast Insulators and Bushings,
DMC & SMC Mouldings
Fiberglass Reinforced Plastic Mouldings,
FRP Tanks & Linings, Fiberglass Tubes & Rods
Thermoplastic & Thermoset
Industrial Plastic Mouldings